ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ತಪ್ಪು ಯಾರೂ ಮಾಡಿಲ್ಲ. ಬೇರೆ ಬೇರೆ ಇಲಾಖೆಗಳನ್ನು ತೆಗೆದುಕೊಂಡು ವ್ಯವಸ್ಥೆ ಮಾಡಬೇಕಾದರೆ, ಸ್ವಲ್ಪ ಸಮಯ ತೆಗೆದುಕೊಂಡಿದೆ.

ಅಧ್ಯಕ್ಷರು.—ಮಾನ್ಯ ಶ್ರೀ ಸಿ. ಎಂ. ಉದಾಸಿ ಅವರ ಗಮನ ಸೆಳೆಯುವ ಸೂಚನೆಯನ್ನು ಮುಂದೂಡಲಾಗಿದೆ.

ನಿಯಮ ೩೫ಳ ಮೇರೆಗೆ

(i) ಅರಣ್ಯ ರಕ್ಷಣಾ ದಳದ ಜಂಟಿ ಕ್ರಿಯಾ ಸಮಿತಿಯವರು ಮುಷ್ಕರ ಹೂಡುವುದಾಗಿ ನೋಟೀಸ್ ನೀಡಿರುವುದು.

ಶ್ರೀ ಬಿ ಎನ್. ಬಚ್ಚೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಅರಣ್ಯ ರಕ್ಷಣಾ ದಳದ ಜಂಟಿ ಕ್ರಿಯಾ ಸಮಿತಿಯು ದಿನಾಂಕ ೬-೩-೧೯೮೬ ರಿಂದ ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ಹೂಡುವುದಾಗಿ ಸರ್ಕಾರಕ್ಕೆ ನೋಟೀಸು ನೀಡಿರುವುದು ನಿಜವೇ ? ಹಾಗಿದ್ದಲ್ಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ವಲಯ ಅರಣ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಅರಣ್ಯ ಪಾಲಕರ ಸಂಘ, ಕರ್ನಾಟಕ ರಾಜ್ಯ ಅರಣ್ಯ ರಕ್ಷಕರ ಸಂಘ ಮತ್ತು ಕರ್ನಾಟಕ ರಾಜ್ಯ ವೀಕ್ಷಕರ ಸಂಘಗಳು ಒಂದು ಬೇಡಿಕೆಯ ಪಟ್ಟಿಯನ್ನು ಕೊಟ್ಟಿರುವುದು ನಿಜ. ಈ ಬೇಡಿಕೆಗಳ ಬಗ್ಗೆ ದಿನಾಂಕ ೧೩-೧-೮೬ರಂದು ಈ ಮೇಲ್ಕಂಡ ಸಂಘಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಲಾಯಿತು. ಆ ನಂತರ ಈ ಸಂಘಗಳು ದಿನಾಂಕ ೬-೩-೮೬ ರಿಂದ ಮುಷ್ಕರ ಹೂಡುವುದಾಗಿ ಸೂಚನೆಯೊಂದನ್ನು ಕೊಟ್ಟಿರುತ್ತಾರೆ. ಅವರ ಬೇಡಿಕೆಗಳಲ್ಲಿ ಇತರ ಇಲಾಖೆಗಳಲ್ಲಿ ಸಮಾನ ಕೇಡರ್‌ಗೆ ಇರುವ ವೇತನ ಶ್ರೇಣಿಯನ್ನು ತಮಗೂ ಕೊಡುವುದು, ವಲಯ ಅರಣ್ಯಾಧಿಕಾರಿಗಳ ಒಂದನೇ ಮತ್ತು ಎರಡನೇ ದರ್ಜೆಯನ್ನು ಒಂದುಗೂಡಿಸುವುದು, ಕೆಳ ಹಂತದ ಆಡಳಿತ ಘಟಕಗಳ ಪುನರ್‌ರಚನೆ, ಅರಣ್ಯ ರಕ್ಷಣೆ ಮತ್ತು ಇತರೆ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅಧಿಕ ಸವಲತ್ತುಗಳನ್ನು ನೀಡುವುದು, ಬಂದೂಕು ಮತ್ತು ಮದ್ದು ಗುಂಡುಗಳನ್ನು, ವಾಹನಗಳು ಸಂಪರ್ಕ ಸಾಧನಗಳು, ಬಾಡಿಗೆರಹಿತ ತಪಸತಿ ಸೌಲಭ್ಯ, ಬಟ್ಟೆ ಒಗೆಯುವ ಭತ್ಯೆಗಳನ್ನು ಕೊಡುವುದು ಇತ್ಯಾದಿಗಳು ಸೇರಿವೆ.

ವಿವಿಧ ದರ್ಜೆಗಳ ನೌಕರರ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ನಿಯಮಗಳಿಗೆ ತಿದ್ದುಪಡಿ ತರುವುದಾಗಿ ಸಹ ಅವರ ಬೇಡಿಕೆಗಳಲ್ಲಿ ಒಂದಾಗಿದೆ. ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲು ಸರ್ಕಾರ ಸಮ್ಮತಿಸಿದೆ. ಈ ಎಲ್ಲಾ ಬೇಡಿಕೆಗಳನ್ನು ಪೂರೈಸಲು ಸಾಕಷ್ಟು ಹಣ ಅಗತ್ಯವಿರುವುದರಿಂದ ಹಾಗೂ ನಿಯಮಗಳನ್ನು ತಿದ್ದುಪಡಿ ಮಾಡಬೇಕಾಗಿರುವುದರಿಂದ ಇವುಗಳನ್ನು ವಿಮರ್ಶಿಸಲಾಗುತ್ತಿದೆ. ವಿವಿಧ ದರ್ಜೆಗಳ ನೌಕರರ ವೇತನ ಶ್ರೇಣಿಯನ್ನು ಪುನರ್‌ರಚಿಸಿ ಶಿಫಾರಸ್ ಮಾಡಲು ಸರ್ಕಾರವು ಈಗಾಗಲೇ ಒಂದು ಹೊಸ ವೇತನ ಆಯೋಗವನ್ನು ರಚಿಸಿದೆ. ರಾಜ್ಯವು ಈಗ ಅತ್ಯಂತ ಭೀಕರ ಕ್ಷಾಮದಿಂದ ತತ್ತರಿಸುತ್ತಿದೆ. ಮೇಲ್ಕಂಡ ಸಂಘಗಳ ಬೇಡಿಕೆಗಳು ಬಹು ವಿಧವಾಗಿದ್ದು ಅವುಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಬೇಕಾಗಿದೆ. ಆದಾಗ್ಯೂ ಈ ಬರಗಾಲದ ಪರಿಸ್ಥಿತಿ ಸುಧಾರಿಸಿ ನಂತರ ಸರ್ಕಾರವು ಅತಿ ಕಡಿಮೆ ಸಮಯದಲ್ಲಿ ಈ ಬೇಡಿಕೆಗಳನ್ನು ಸರಿಪಡಿಸಲು ಆಸಕ್ತಿಯನ್ನು ವಹಿಸಿರುತ್ತದೆ.

ಅವರ ಬೇಡಿಕೆಗಳಲ್ಲಿ ವಿವಿಧ ದರ್ಜೆಯ ನೌಕರರ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ನಿಯಮಗಳಿಗೆ ತಿದ್ದುಪಡಿ ತರುವುದು ಒಂದಾಗಿದ್ದು ಇದನ್ನು ಸರ್ಕಾರ ಈಗಾಗಲೇ ವಿಮರ್ಶನೆ ಮಾಡುತ್ತಿದ್ದು ಇದನ್ನು ೪ ತಿಂಗಳ ಒಳಗೆ ಕಾರ್ಯಗಳ ಮಾಡಲಾಗುವುದು.

ಈ ವಿಷಯವನ್ನು ಮೇಲ್ಕಂಡ ಸಂಘಗಳಿಗೆ ಈಗಾಗಲೇ ತಿಳಿಸಿದ್ದು ಅವರುಗಳು ಈಗಿರುವ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಈ ವಿಷಯದಲ್ಲಿ ದುಡುಕುವುದಿಲ್ಲವೆಂದು ನಾನು ಆಶಿಸುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಸುಮಾ ಬಂಗಾರಪ್ಪ ಗೈರುಹಾಜರಿ.